# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀಮತಿ ಜಯಮ್ಮ ಕೋಂ ಲಂಕ್ಯಪ್ಪ ಅಧ್ಯಕ್ಷರು, ಕನಗೊಂಡನಹಳ್ಳಿ ಗ್ರಾಮ ಪಂಚಾಯತಿ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 48(4) ಮತ್ತು 48(5) ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1) ಇವರ ಪತ್ರ ಸಂಖ್ಯೆ:ಜಿಪಂದಾಪಶಾ:ಸಿಆರ್-19/2018-19, ದಿನಾಂಕ:05.09.2018.
2) ಇದೇ ಸಮ ಸಂಖ್ಯೆಯ ಕಾರಣ ಕೇಳುವ ನೋಟಿಸ್ ದಿನಾಂಕ:27.09.2018.
3) ಸರ್ಕಾರದ ಸಮಸಂಖ್ಯೆಯ ವಿಚಾರಣಾ ನೋಟೀಸ್ ದಿನಾಂಕ:06-12-2017.
4) ಶ್ರೀಮತಿ ಜಯಮ್ಮ ಕೋಂ ಲಂಕ್ಯಪ್ಪ, ಅಧ್ಯಕ್ಷರು, ಕನಗೊಂಡನಹಳ್ಳಿ ಗ್ರಾಮ ಪಂಚಾಯತಿ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ಇವರ ಲಿಖಿತ ಹೇಳಿಕೆ ದಿನಾಂಕ:06.11.2019

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ದಾವಣಗೆರೆ ಜಿಲ್ಲೆ ಇವರು ಕನಗೊಂಡನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಜಯಮ್ಮ ಕೋಂ ಲಂಕ್ಯಪ್ಪ, ಇವರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುವಲ್ಲಿ ಕಡತಗಳನ್ನು ಸುಮಾರು 4 ಮತ್ತು 5 ತಿಂಗಳಿಂದ ಸಹಿ ಹಾಕದೇ ಹಾಗೂ ಅಭಿವೃದ್ಧಿ ಕಾಮಗಾರಿಗಳು ಕುಂಠಿತವಾಗಲು ಕಾರಣವಾಗಿರುವುದಾಗಿ ಸದರಿ ಗ್ರಾಮ ಪಂಚಾಯತಿ ಉಪಾಧ್ಯಕ್ಷರು ಹಾಗೂ ಸದಸ್ಯರುಗಳು ಜಿಲ್ಲಾ ಪಂಚಾಯತಿಗೆ ವರದಿ ಸಲ್ಲಿಸಿರುತ್ತಾರೆ ಹಾಗೂ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ದಾವಣಗೆರೆ ಜಿಲ್ಲೆ ಇವರ ದಿನಾಂಕ:04.07.2018 ರ ವರದಿಯಲ್ಲಿ ಸದರಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಕಛೇರಿಗೆ ಸಂಬಂಧಿಸಿದ ಕಡತ ಮತ್ತು ಹಣ ಪಾವತಿ ಚಕ್ಕುಗಳಿಗೆ ಸಹಿ ಹಾಕಿರುವುದಾಗಿ ವರದಿ ಮಾಡಿರುತ್ತಾರೆ.

ದಿನಾಂಕ:23.08.2018 ರ ಮನವಿಯಲ್ಲಿ ಶ್ರೀಮತಿ ಮಾಳಮ್ಮ ಅಭಿವೃದ್ಧಿ ಅಧಿಕಾರಿ, ಕನಗೊಂಡನಹಳ್ಳಿ ಇವರು ಮೀಟಿಂಗ್ ಹಾಲಿಗೆ ಟೇಬಲ್ ಮಾಡಿಸುವ ವಿಚಾರವಾಗಿ ಇದ್ದಕ್ಕಿದ್ದ ಹಾಗೆ ಜಗಳ ತೆಗೆದು ಅವಾಚ್ಯ ಶಬ್ಧಗಳಲ್ಲಿ ನಿಂದಿಸಿ, ಹಲ್ಲೆ ಮಾಡಿರುವುದಲ್ಲದೇ ಅಧ್ಯಕ್ಷರ ಮಗನಾದ ಶ್ರೀ ಶರತ್ ರವರು ದೈಹಿಕವಾಗಿ ಹಲ್ಲೆ ನಡೆಸಿದ್ದು, ಈ ಬಗ್ಗೆ ಹದಡಿ ಪೋಲೀಸ್ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆಂದು ತಿಳಿಸುತ್ತಾರೆ.

ಅಲ್ಲದೇ ಸದರಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಸರ್ಕಾರದ ಮಹಾತ್ವಾಕಾಂಕ್ಷಿ ಯೋಜನೆಗಳಾದ ಎನ್.ಆರ್.ಇ.ಜಿ.ಎ. ಎಸ್.ಬಿ.ಎಮ್. ವಸತಿ ಯೋಜನೆಗಳು ಹಾಗೂ ಇತರೆ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಹಣ ಪಾವತಿಸಲು ಸಹಕಾರವನ್ನು ನೀಡದೆ ಹಲ್ಲೆ ನಡೆಸಿರುತ್ತಾರೆ ಹಾಗೂ ಕಛೇರಿ ಟಿಪ್ಪಣಿಗಳಿಗೆ "ನಾನು ಸಹಿ ಮಾಡುವುದಿಲ್ಲ ನನ್ನ ಮಗನೇ ಸಹಿ ಮಾಡುತ್ತಾನೆ" ಎಂದು ದುರ್ನಡತೆಯನ್ನು ತೋರಿರುವುದಲ್ಲದೇ ಅಧ್ಯಕ್ಷರ ಮಗನಾದ ಶ್ರೀ ಶರತ್ ರವರು ದಿನಾಂಕ:23.12.2016 ಮತ್ತು 11.07.2017 ರಂದು ಕಛೇರಿಯೊಳಗೆ ನುಗ್ಗಿ ಕಾಮಗಾರಿಗಳ ಕಡತಗಳ ಕಛೇರಿ ಟಿಪ್ಪಣಿಗಳಿಗೆ ಸಹಿ ಮಾಡಿರುವುದಾಗಿ ತಿಳಿಸುತ್ತಾ, ಸದರಿ ಅಧ್ಯಕ್ಷರ ಮೇಲೆ ಕರ್ನಾಟಕ ಪಂಚಾಯತ್ ಗ್ರಾಮ ಸ್ವರಾಜ್ ಕಾಯ್ದೆ ಕಲಂ 43(ಎ) ಮತ್ತು ಕಲಂ 48 ರನ್ವಯ ಕ್ರಮಜರುಗಿಸುವಂತೆ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ ರವರು ಕೋರಿರುತ್ತಾರೆ.

ಈ ಎಲ್ಲಾ ಅಂಶಗಳ ದಾಖಲೆಗಳನ್ನು ಪರಿಶೀಲಿಸಿ, ಸದರಿ ಅಧ್ಯಕ್ಷರು ಸಾಮಾನ್ಯ ಸಭೆಗಳನ್ನು ಕರೆಯುವಲ್ಲಿ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಫಲವಾಗಿರುವುದು ಕಂಡು ಬರುತ್ತದೆ ಹಾಗೂ ನೌಕರರ ಮೇಲೆ ದೈಹಿಕವಾಗಿ ಹಲ್ಲೆ ನಡೆಸಿರುವುದು ದೃಢಪಟ್ಟಿರುವುದರಿಂದ ಅಧ್ಯಕ್ಷರ ಮೇಲೆ ಕರ್ನಾಟಕ ಪಂಚಾಯತ್ ಗ್ರಾಮ ಸ್ವರಾಜ್ ಕಾಯ್ದೆ ಕಲಂ 43(ಎ) ಮತ್ತು ಕಲಂ 48 ರನ್ವಯ ಕ್ರಮಜರುಗಿಸುವಂತೆ ಸರ್ಕಾವನ್ನು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ(2)ರ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿ, ಪ್ರಕರಣದ ವಿಚಾರಣೆಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅರೆನ್ಯಾಯಿಕ ನ್ಯಾಯಾಲಯದಲ್ಲಿ ನಡೆಸಲು ತೀರ್ಮಾನಿಸಿ, ಅದರಂತೆ ವಿಚಾರಣಾ ಹಾಜರಾತಿ ತಿಳುವಳಿಕೆ ಪತ್ರ ದಿನಾಂಕ:27.02.2019, 24.07.2019, 14.08.2019, 06.09.2019, 15.10.2019 ಮತ್ತು 06.11.2019ರ ಗಳಂದು ವಿಚಾರಣೆಗೆ ತೆಗೆದುಕೊಂಡು, ವಿಚಾರಣೆ ನಡೆಸಲಾಗಿರುತ್ತದೆ.

ಪ್ರಕರಣದ ವಿಚಾರಣಾ ಸಮಯದಲ್ಲಿ ಆಪಾದಿತ ಅಧ್ಯಕ್ಷರ ಹೇಳಿಕೆ ಮತ್ತು ಜಿಲ್ಲಾ ಪಂಚಾಯಿತಿಗಳ ವರದಿಗಳನ್ನು ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ ಪರಿಶೀಲಿಸಲಾಗಿ, ಆಪಾದಿತ ಅಧ್ಯಕ್ಷರು ಮಾಹಿತಿ/ದಾಖಲೆಗಳು/ಹೇಳಿಕೆ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ದಾವಣಗೆರೆ ಇವರು 2017-18, 2018-19 ಮತ್ತು 2019-20ನೇ ಸಾಲಿನ 14ನೇ ಹಣಕಾಸಿಗೆ ಸಂಬಂಧಿಸಿದ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡಿರುವ ಮಾಹಿತಿ ಮತ್ತು 2017-18ನೇ ಸಾಲಿನ ಗ್ರಾಮ ವಿಕಾಸ ಯೋಜನೆಗಳ ಅನುದಾನ ಬಿಡುಗಡೆಯ ಮಾಹಿತಿ ನೀಡಿದ್ದು, ಆದರೆ ದೂರಿನಲ್ಲಿ ಸಲ್ಲಿಸಲಾದ 2016-17, 2017-18 ಮತ್ತು 2018-19ನೇ ಸಾಲಿನಲ್ಲಿನ ಕಚೇರಿ ಟಿಪ್ಪಣಿ, ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ, ವಸತಿ ಯೋಜನೆ ಮತ್ತು ಸ್ವಚ್ಛ ಭಾರತ್ ಮಿಷನ್ ಪ್ರೋತ್ಸಾಹಧನ. ಈ ಕಾರ್ಯಕ್ರಮ /ಯೋಜನೆಗಳಿಗೆ ಸಂಬಧಿಸಿದಂತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

ಮೇಲೆ ಓದಲಾದ ಕ್ರಮಾಂಕ (4)ರ ದಿನಾಂಕ:06.11.2019ರ ಲಿಖಿತ ಹೇಳಿಕೆಯಲ್ಲಿ ಶ್ರೀಮತಿ ಜಯಮ್ಮ ಕೋಂ ಲಂಕ್ಯಪ್ಪ, ಅಧ್ಯಕ್ಷರು, ಕನಗೊಂಡನಹಳ್ಳಿ ಗ್ರಾಮ ಪಂಚಾಯತಿ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ಇವರು ಈ ಮೂಲಕ ಪ್ರಾರ್ಥಿಸುವುದೇನೆಂದರೆ, ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಜಯಮ್ಮಳಾದ ನಾನು ಪಿ.ಡಿ.ಓ ಮಾಳಮ್ಮನವರು ನೀಡಿರುವ ಇಲ್ಲಸಲ್ಲದ ಆರೋಪಗಳನ್ನು ನೀಡಿರುತ್ತಾರೆ. ಆದರೆ, ನಾನು ನನ್ನ ಕೆಲಸವನ್ನು ನಿಷ್ಠೆಯಿಂದ ಯಾವುದೇ ನಿರ್ಲಕ್ಷತೆಯನ್ನು ತೋರದೇ ಕನಗೊಂಡನಹಳ್ಳಿ ಗ್ರಮ ಪಂಚಾಯಿತಿಯ ಎಲ್ಲಾ ಕಾರ್ಯಗಳನ್ನು ಇದುವರೆಗೂ ನಡೆಸಿಕೊಂಡು ಬಂದಿರುತ್ತೇನೆ. ನನ್ನ ವಿರುದ್ಧ ಪಿಡಿಓ ಮಾಳಮ್ಮನವರು ಉದ್ದೇಶಪೂರ್ವಕವಾಗಿ ನನಗೆ ಮಾನಸಿಕ ಕಿರುಕುಳ ಮತ್ತು ಉದ್ದೇಶಕ್ಕಾ ಕರ್ನಾಟಕ ಪಂಚಾಯತ್ ಗ್ರಾಮ ಸ್ವರಾಜ್ ಕಾಯಿದೆಯ ಕಲಂ 43(ಎ) ಮತ್ತು ಕಲಂ 48ರ ಅನ್ವಯ ಕ್ರಮ ಜರುಗಿಸಲು ಯಾವುದೇ ರೀತಿಯ ಸಕಾರಣಗಳು ಇಲ್ಲದಿದ್ದರೂ ನನ್ನ ವಿರುದ್ಧ ಸುಳ್ಳು ಆರೋಪ ಮಾಡಿರುತ್ತಾರೆ. ನನ್ನ ಮೂಲಭೂತ ಕರ್ತವ್ಯವಾದ ಅಭಿವೃದ್ಧಿಯನ್ನು ಉತ್ತಮ ಪಥದಲ್ಲಿ ಸಾಗಿಸುತ್ತಾ ಬಂದಿರುತ್ತೇನೆ. ನಾನು ಅನಕ್ಷರಸ್ಥ ಮಹಿಳೆ ಆದರೂ ಸಹ ನನ್ನ ಕೆಲಸದಲ್ಲಿ ಯಾವುದೇ ರೀತಿಯ ಇದುವರೆಗೂ ಅಧಿಕಾರ ದುರುಪಯೋಗ ಮಾಡಿರುವುದಿಲ್ಲ. ಆದರೂ ಸಹ ಪಿ.ಡಿ.ಓ ಆದ ಮಾಳಮ್ಮನವರು ನಮ್ಮ ಮೇಲೆ ನೀಡಿರುವ ಈ ದೂರು ಸುಳ್ಳೆಂದು ತಮಗೆ ತಿಳಿಯಪಡಿಸುತ್ತಿದ್ದೇನೆ. ಅವರಿಂದ ಅವರು ನೀಡಿರುವ ದೂರನ್ನು ವಜಾಗೊಳಿಸಬೇಕಾಗಿ ಹಾಗೂ ನನಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿ ನ್ಯಾಯ ದೊರಕಿಸಿಕೊಡಬೇಕಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಆದರೆ, ಅಧ್ಯಕ್ಷರು, ಕರ್ತವ್ಯ ನಿರತ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮೇಲೆ ದೈಹಿಕ ಹಲ್ಲೆ ಮಾಡಿರುವ ಬಗ್ಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು, ಪೋಲೀಸ್ ಠಾಣೆಗೆ ದೂರು ನೀಡಿ ನಂತರ ದಾವಣಗೆರೆಯ ಜ.ಎಂ.ಎಫ್.ಸಿ-2 ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಸರ್ಕಾರದ ಸಂಖ್ಯೆ:ಗ್ರಾಅಪ 1269 ಗ್ರಾಪಂಅ 2018 ದಿನಾಂಕ:07.03.2019ರಲ್ಲಿ ಪೋಲೀಸ್ ಅಧೀಕ್ಷರು ದಾವಣಗೆರೆ ಇವರಿಗೆ ಅಭಿಯೋಜನಾ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಅದರಂತೆ, ಪೋಲೀಸ್ ಠಾಣೆಯ ಅಂತಿಮ ವರದಿ / ಚಾರ್ಜ್ ಶೀಟ್ ಸಂಖ್ಯೆ:192/2018ರ ಪುಟ:9ರ ಕ್ರಮ ಸಂಖ್ಯೆ: 17ರಲ್ಲಿ ಆಪಾದನೆಯು ದೃಡಪಟ್ಟಿರುತ್ತದೆ.

ಆದುದರಿಂದ ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಜಯಮ್ಮ ಕೋಂ ಲಂಕ್ಯಪ್ಪ, ಅಧ್ಯಕ್ಷರು, ಕನಗೊಂಡನಹಳ್ಳಿ ಗ್ರಾಮ ಪಂಚಾಯತಿ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ಇವರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 1993ರ ಪ್ರಕರಣ 48(4) ಮತ್ತು 48(5) ರಡಿ ಗ್ರಾಮ ಪಂಚಾಯತಿಯ ಅಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವದಿಂದ ತೆಗೆದು ಹಾಕಲು ಸರ್ಕಾರವು ನಿರ್ಣಯಿಸಿದೆ..

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 953 ಗ್ರಾಪಂಅ 2018 ಬೆಂಗಳೂರು, ದಿನಾಂಕ:09.03.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನೆಲೆಯಲ್ಲಿ, ಶ್ರೀಮತಿ ಜಯಮ್ಮ ಕೋಂ ಲಂಕ್ಯಪ್ಪ, ಅಧ್ಯಕ್ಷರು, ಕನಗೊಂಡನಹಳ್ಳಿ ಗ್ರಾಮ ಪಂಚಾಯತಿ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ಇವರು 2017-18, 2018-19 ಮತ್ತು 2019-20ನೇ ಸಾಲಿನ 14ನೇ ಹಣಕಾಸಿಗೆ ಸಂಬಂಧಿಸಿದ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡಿರುವ ಮಾಹಿತಿ ಮತ್ತು 2017-18ನೇ ಸಾಲಿನ ಗ್ರಾಮ ವಿಕಾಸ ಯೋಜನೆಗಳ ಅನುದಾನ ಬಿಡುಗಡೆಯ ಮಾಹಿತಿ ನೀಡಿದ್ದು, ಆದರೆ ದೂರಿನಲ್ಲಿ ಸಲ್ಲಿಸಲಾದ 2016-17, 2017-18 ಮತ್ತು 2018-19ನೇ ಸಾಲಿನಲ್ಲಿನ ಕಚೇರಿ ಟಿಪ್ಪಣಿ, ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ, ವಸತಿ ಯೋಜನೆ ಮತ್ತು ಸ್ವಚ್ಛ ಭಾರತ್ ಮಿಷನ್ ಪ್ರೋತ್ಸಾಹಧನ. ಈ ಕಾರ್ಯಕ್ರಮ /ಯೋಜನೆಗಳಿಗೆ ಸಂಬಧಿಸಿದ ಸರ್ಕಾರದ ಹಣ ದುರುಪಯೋಗಪಡಿಸಿಕೊಂಡು ಅವ್ಯವಹಾರ ಮತ್ತು ಕರ್ತವ್ಯಲೋಪ ಮಾಡಿರುವುದರಿಂದ ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷರು ಸಮರ್ಪಕವಾಗಿ ಜವಾಬ್ದಾರಿಯುತವಾಗಿ ಹಾಗೂ ಪಾರದರ್ಶಕವಾಗಿ ತಮ್ಮ ಕರ್ತವ್ಯಗಳನ್ನು ನಿಭಾಯಿಸದೆ ಇರುವುದು ಸಾಬೀತಾಗಿರುತ್ತದೆ ಹಾಗೂ ಈ ಪ್ರಕರಣದಲ್ಲಿ ಪೋಲೀಸ್ ಠಾಣೆಯ ಅಂತಿಮ ವರದಿ / ಚಾರ್ಜ್ ಶೀಟ್ ಸಂಖ್ಯೆ:192/2018ರ ಪುಟ:9ರ ಕ್ರಮ ಸಂಖ್ಯೆ: 17ರಲ್ಲಿ ಆಪಾದನೆಯು ದೃಡಪಟ್ಟಿರುತ್ತದೆ. ಆದುದರಿಂದ ಶ್ರೀಮತಿ ಜಯಮ್ಮ ಕೋಂ ಲಂಕ್ಯಪ್ಪ, ಕನಗೊಂಡನಹಳ್ಳಿ ಗ್ರಾಮ ಪಂಚಾಯತಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 1993ರ ಪ್ರಕರಣ 48(4) ಮತ್ತು 48(5) ರಡಿ ಕನಗೊಂಡನಹಳ್ಳಿ ಗ್ರಾಮ ಪಂಚಾಯತಿಯ ಅಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವದಿಂದ ತೆಗೆದುಹಾಕಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. Naveenkumar 09/03/2020
(ನವೀನ್ ಕುಮಾರ್. ಬಿ)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ**

1) ಜಿಲ್ಲಾಧಿಕಾರಿ, ದಾವಣಗೆರೆ ಜಿಲ್ಲೆ, ದಾವಣಗೆರೆ.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ದಾವಣಗೆರೆ ಜಿಲ್ಲೆ.
3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ದಾವಣಗೆರೆ ಮತ್ತು ಜಿಲ್ಲೆ.

4) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕನಗೊಂಡನಹಳ್ಳಿ ಗ್ರಾಮ ಪಂಚಾಯತಿ, ದಾವಣಗೆರೆ ತಾಲ್ಲೂಕು, ಮತ್ತು ಜಿಲ್ಲೆ.
5) ಶ್ರೀಮತಿ ಮಾಳಮ್ಮ ಎನ್. ಪಂಚಾಯತಿ ಅಭಿವೃದ್ಧಿ ಅಧಿಕಾರಿ, ನೇರ್ಲಿಗೆ ಗ್ರಾಮ ಪಂಚಾಯತಿ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ (ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳ).
6) ಶ್ರೀಮತಿ ಜಯಮ್ಮ ಕೋಂ ಲಂಕ್ಯಪ್ಪ, ಕನಗೊಂಡನಹಳ್ಳಿ ಗ್ರಾಮ ಪಂಚಾಯತಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ **(ಇವರಿಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ಇವರ ಮುಖಾಂತರ)**
7) ಗಣಕ ಕೋಶ.

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ (ಪಂ.ರಾಜ್), ಆಪ್ತ ಕಾರ್ಯದರ್ಶಿ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.